RNU AIR DHARWAD

DECEMBER 02, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಉತ್ತರಕನ್ನಡ ಜಿಲ್ಲೆ, ಕಾರವಾರದ ಜಿಲ್ಲಾ ಪಂಚಾಯಿತಿ ಸಭಾಭವನದಲ್ಲಿ, ನಿಷ್ಕ್ರಿಯ ಖಾತೆಗಳ ವಾರಸುದಾರರಿಗೆ, ಬ್ಯಾಂಕ್ ಠೇವಣಿಗಳ ಮಾಹಿತಿ ನೀಡಿ, ಹಸ್ತಾಂತರಿಸುವ ಶಿಬಿರ ನಡೆಯಿತು. ಭಾರತೀಯ ರಿಸರ್ವ ಬ್ಯಾಂಕಿನ, ಸಹಾಯಕ ಪ್ರಧಾನ ವ್ಯವಸ್ಥಾಪಕಿ, ನಿಶಾ ಠಾಕೂರ ಪಾಲ್ಗೊಂಡು, ನಿಷ್ಕ್ರಿಯ ಖಾತೆ ಮತ್ತು ಠೇವಣಿಗಳನ್ನು, ಸೂಕ್ತ ದಾಖಲೆಗಳೊಂದಿಗೆ, ಮರಳಿ ಪಡೆಯಬಹುದು ಎಂದರು.  ಜಿಲ್ಲಾ ಅಗ್ರಣಿ ಬ್ಯಾಂಕ್ ವ್ಯವಸ್ಥಾಪಕ ರಾಜಪ್ಪ ಗೌಳಿ, ಆರ್ಥಿಕ ಸಾಕ್ಷರತಾ ಆಂದೋಲನ, ಕೈಗೊಳ್ಳಲಾಗುತ್ತಿದೆ, ಎಂದರು.**

<><><>

**ಧಾರವಾಡದ ಜೆ.ಎಸ್.ಎಸ್. ಬನಶಂಕರಿ ಕಲಾ, ವಾಣಿಜ್ಯ ಮತ್ತು ಶಾಂತಕುಮಾರ ಗುಬ್ಬಿ ವಿಜ್ಞಾನ ಮಹಾವಿದ್ಯಾಲಯದಲ್ಲಿ, ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ, 78ನೇ ಜನ್ಮದಿನದ ಅಂಗವಾಗಿ, "ಮಾನವ ಹಕ್ಕುಗಳು ಮತ್ತು ಕರ್ತವ್ಯಗಳು" ಕುರಿತ, ವಿಶೇ ' ಉಪನ್ಯಾಸ ಜರುಗಿತು.  ಧಾರವಾಡ ಉಚ್ಚ ನ್ಯಾಯಾಲಯದ, ಎಡಿಷನಲ್ ಎಡ್ವೋಕೇಟ್ ಜನರಲ್,  ಜಿ.ಎಂ.ಗಂಗಾಧರ ಪಾಲ್ಗೊಂಡು, ಸಂವಿಧಾನ ಮೌಲ್ಯಗಳು ಹಾಗೂ ಜವಾಬ್ದಾರಿಯುತ ನಾಗರಿಕತೆಯ ಅಗತ್ಯತೆ ಬಗ್ಗೆ, ಉಪನ್ಯಾಸ ನೀಡಿದರು.**

<><><>

**ಈ ತಿಂಗಳ 21 ರಂದು ನಡೆಯಲಿರುವ, 'ಪಲ್ಸ್ ಪೊಲಿಯೋ' ಕಾರ್ಯಕ್ರಮವನ್ನು, ಯಶಸ್ವಿಗೊಳಿಸಲು, ಸೂಕ್ತ ಪೂರ್ವ ಸಿದ್ಧತೆ ಕೈಗೊಳ್ಳುವಂತೆ, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ, ಆರೋಗ್ಯ ಇಲಾಖೆ ಅಧಿಕಾರಿಗಳಿಗೆ, ಸೂಚಿಸಿದ್ದಾರೆ. ಮೈಸೂರಿನ, ಚಾಮುಂಡೇಶ್ವರಿ ಸಭಾಂಗಣದಲ್ಲಿ, ಇಲಾಖೆಯ ಪ್ರಗತಿ ಪರಿಶೀಲಿಸಿ, ಮಾತನಾಡಿದರು. ಹಾವು ಮತ್ತು ನಾಯಿ ಕಡಿತದ ಪ್ರಕರಣಗಳಲ್ಲಿ, ಸಕಾಲಿಕ, ಸೂಕ್ತ ಹಾಗೂ ಉಚಿತ ಚಿಕಿತ್ಸೆಗೆ ಆದ್ಯತೆ ನೀಡುವಂತೆ, ನಿರ್ದೇಶಿಸಿದರು. ಮಕ್ಕಳಿಗೆ ನೀಡುವ ಚುಚ್ಚುಮದ್ದುಗಳಾದ, ದಡಾರ ಮತ್ತು ರುಬೆಲ್ಲಾ, ಗುರಿ ತಲುಪಲು, ಯೋಜಿತ ಪ್ರಯತ್ನ ಕೈಗೊಳ್ಳುವಂತೆ, ಸಚಿವರು ಹೇಳಿದರು.**

<><><>

**ನಾಳೆ ಶ್ರೀ ಹನುಮ ಜಯಂತಿ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಶುಭಾಶಯ ಕೋರಿದ್ದಾರೆ. ಹನುಮನುದಿಸಿದ ನಾಡು, ಕೊಪ್ಪಳ ಜಿಲ್ಲೆ, ಗಂಗಾವತಿ ತಾಲೂಕು, ಅಂಜನಾದ್ರಿ ಸೇರಿದಂತೆ, ನಾಡಿನಾದ್ಯಂತ, ಹನುಮ ಮಂದಿರಗಳಲ್ಲಿ, ಬಾಲ ಹನುಮನ ತೊಟ್ಟಿಲೋತ್ಸವಕ್ಕಾಗಿ, ವಿಶೇಷ ಅಲಂಕಾರ ಹಾಗೂ ಸಂಜೆ ತೇರನೆಳೆಯುವ ಸಂಪ್ರದಾಯಕ್ಕೆ, ನಾಡು ಸಜ್ಜುಗೊಂಡಿತು.  ಅಂಜನಾದ್ರಿ ಹನುಮಮಾಲೆ ಉತ್ಸವದ ಸಿದ್ಧತೆ ಕುರಿತು, ಮಾಹಿತಿ ನೀಡಿದ್ದಾರೆ, ಕೊಪ್ಪಳ ಜಿಲ್ಲಾಧಿಕಾರಿ, ಸುರೇಶ ಇಟ್ನಾಳ.**

<><><>

ಜಿಲ್ಲಾಧಿಕಾರಿ ಸುರೇಶ ಇಟ್ನಾಳ ಧ್ವನಿ 40 ಸೆಕೆಂದುಗಳು

<><><>

ಶಿವಮೊಗ್ಗದ, ಕೋಟೆ ಶ್ರೀ ಸೀತಾ ರಾಮಾಂಜನೇಯ ಸ್ವಾಮಿ ದೇವಾಲಯದಲ್ಲಿ, 7ನೇ ತಾರೀಖಿನಿಂದ, ಜನೆವರಿ 5ರ ವರೆಗೆ, ಕೋಟಿ ತ್ರಯ ರಾಮ ನಾಮಾರ್ಚನ ಮಹೋತ್ಸವ, ಜರುಗಲಿದೆ.

<><><>

ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಲ್ಲಿ, 8 ಸಾವಿರದ 860 ಕಿಲೋ ಮೀಟರ್ ನಷ್ಟು, 'ಕಲ್ಯಾಣ ಪಥ' ನಿರ್ಮಾಣಕ್ಕೆ, ರಾಜ್ಯ ಸರ್ಕಾರ ಚಾಲನೆ ನೀಡಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, 2023–24ನೇ ಸಾಲಿನ, ಗಾಂಧಿ ಗ್ರಾಮ ಪುರಸ್ಕಾರಗಳನ್ನು, 238 ಗ್ರಾಮ ಪಂಚಾಯ್ತಿಗಳಿಗೆ, 5 ಲಕ್ಷ ರೂಪಾಯಿ ಪ್ರೋತ್ಸಾಹ ಧನ ಹಾಗೂ ಸ್ಮರಣಿಕೆ ಪ್ರದಾನಿಸಿ, ಎರಡನೇ ಆವೃತ್ತಿಯ ಇ–ಸ್ವತ್ತು ತಂತ್ರಾಂಶಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ವಿಜಯನಗರ ಜಿಲ್ಲೆಯಲ್ಲಿ, ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವರ ಮುಂದಾಳತ್ವದಲ್ಲಿ, ಗ್ರಾಮ ಪಂಚಾಯ್ತಿ ವ್ಯಾಪ್ತಿಯಿಂದ ಹೊರಗುಳಿದಿದ್ದ, ತಾಂಡಾಗಳನ್ನು ಸಕ್ರಮಗೊಳಿಸಿ, 1 ಲಕ್ಷ 11 ಸಾವಿರದ 111 ಜನರಿಗೆ, ಹಕ್ಕುಪತ್ರದ ಜೊತೆಗೆ, ಭೂ ದಾಖಲೆಗಳನ್ನು ನೀಡಲಾಗಿದೆ ಎಂದರು.

<><><>

ಮುಂಬರುವ ಕ್ರಿಸ್ಮಸ್ ಹಬ್ಬದ ಸಂದರ್ಭದಲ್ಲಿ, ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿಭಾಯಿಸಲು, ನೈಋತ್ಯ ರೈಲ್ವೆ, ಬೆಂಗಳೂರು ಕಂಟೋನ್ಮೆಂಟ್ ಮತ್ತು ಬೀದರ ನಡುವೆ, ಒಂದು ಟ್ರಿಪ್ ವಿಶೇ ’ ಎಕ್ಸ್ ಪ್ರೆಸ್ ರೈಲನ್ನು ಓಡಿಸಲಿದೆ. ಇದೇ 24 ರಂದು, ಬೆಂಗಳೂರು ಕಂಟೋನ್ಮೆಂಟ್ ರೈಲು ನಿಲ್ದಾಣದಿಂದ, ವಿಶೇ ’ ಎಕ್ಸ್‌ಪ್ರೆಸ್ ರಾತ್ರಿ 9:15ಕ್ಕೆ ಹೊರಟು, ಮರುದಿನ ಬೆಳಿಗ್ಗೆ 11:30ಕ್ಕೆ ಬೀದರ್ ತಲುಪಲಿದೆ. ಮರಳಿ ಬೀದರ್‌ನಿಂದ 25ರ ಮಧ್ಯಾಹ್ನ 1 ಗಂಟೆಗೆ ಹೊರಟು, ಮರುದಿನ ಬೆಳಗಿನ ಜಾವ 4 ಗಂಟೆಗೆ ಬೆಂಗಳೂರು ಕಂಟೋನ್ಮೆಂಟ್ ತಲುಪಲಿದೆ.

<><><>

ಉತ್ತರಕನ್ನಡ ಜಿಲ್ಲೆ, ಕಾರವಾರ ತಾಲೂಕು, ಕೈಗಾದಲ್ಲಿ, 16 ನೇ ಆವೃತ್ತಿಯ ಪಕ್ಷಿ ವೀಕ್ಷಣೆ ಮತ್ತು ದಾಖಲೀಕರಣದ, ಬರ್ಡ್ ಮ್ಯಾರಥಾನ್, ಫೆಬ್ರವರಿ 7 ಹಾಗೂ 8ರಂದು ಆಯೋಜಿತವಾಗಿದೆ. ಪಕ್ಷಿ ವೀಕ್ಷಣೆ ಹಾಗೂ ಗಣತಿಯಲ್ಲಿ, ಆಸಕ್ತಿಯುಳ್ಳವರು, 94489 91753 ಗೆ ಕರೆ ಮಾಡಿ ಹೆಸರು ನೋಂದಾಯಿಸುವಂತೆ, ಎನ್.ಪಿ.ಸಿ.ಎಲ್. ಅಧಿಕಾರಿಗಳು ಕೋರಿದ್ದಾರೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಉಣಕಲ್ಲಿನ ಮನೋವಿಕಲ ಬಾಲಕಿಯರ ಸರ್ಕಾರಿ ಬಾಲಮಂದಿರ ಹಾಗೂ ಮಂದಮತಿ ಮಹಿಳೆಯರ ಅನುಪಾಲನಾ ಗೃಹಕ್ಕೆ, ಧಾರವಾಡ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಭುವನೇಶ ಪಾಟೀಲ ಭೇಟಿ ನೀಡಿ ಪರಿಶೀಲಿಸಿದರು. ಪ್ರೊಬೇ ’ನರಿ ಐ.ಎ.ಎಸ್. ಅಧಿಕಾರಿ ರಿತಿಕಾ ವರ್ಮಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಎಚ್.ಎಚ್. ಕುಕನೂರ ಇದ್ದರು.

<><><>

ಇ–ಶ್ರಮ್ ಪೋರ್ಟಲ್‌ನಲ್ಲಿ ಇದು ವರೆಗೆ, 31 ಕೋಟಿಗೂ ಹೆಚ್ಚು, ಅಸಂಘಟಿತ ಕಾರ್ಮಿಕರು ಮತ್ತು ಐದು ಲಕ್ಷಕ್ಕೂ ಹೆಚ್ಚು ಗಿಗ್ ಹಾಗೂ ಪ್ಲಾಟ್‌ಫಾರ್ಮ್ ಕಾರ್ಮಿಕರು, ಹೆಸರು ನೋಂದಾಯಿಸಿದ್ದಾರೆ ಎಂದು, ಕೇಂದ್ರ ಉದ್ಯೋಗ ಮತ್ತು ಕಾರ್ಮಿಕ ಖಾತೆ ರಾಜ್ಯ ಸಚಿವರಾದ, ಶೋಭಾ ಕರಂದ್ಲಾಜೆ ಲೋಕಸಭೆಗೆ, ತಿಳಿಸಿದ್ದಾರೆ.ಲಿಖಿತ ಉತ್ತರ ನೀಡಿರುವ ಅವರು, ಸಾಮಾಜಿಕ ಭದ್ರತೆ, ಆರೋಗ್ಯ ಮತ್ತು ಕಲ್ಯಾಣ ಸೇರಿದಂತೆ, ವಿವಿಧ ಕೇಂದ್ರ ಸಚಿವಾಲಯಗಳು ಮತ್ತು ಇಲಾಖೆಗಳ 14 ಯೋಜನೆಗಳನ್ನು ಈಗಾಗಲೇ ಇ–ಶ್ರಮ್ ಪೋರ್ಟಲ್‌ನೊಂದಿಗೆ ಸಂಯೋಜಿಸಲಾಗಿದೆ ಎಂದು, ಮಾಹಿತಿ ನೀಡಿದ್ದಾರೆ.

<><><>

ಅಟಲ್ ಪಿಂಚಣಿ ಯೋಜನೆ ಅಡಿ, **8** ಕೋಟಿ **34** ಲಕ್ಷ ಜನ ಹೆಸರು ನೋಂದಾಯಿಸಿದ್ದಾರೆ ಎಂದು, ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್, ಲೋಕಸಭೆಯಲ್ಲಿ ತಿಳಿಸಿದ್ದಾರೆ. ದೇಶಾದ್ಯಂತ ಒಟ್ಟು ಚಂದಾದಾರರಲ್ಲಿ, ಶೇಕಡ **48** ರ ಷ್ಟು ಮಹಿಳೆಯರಿದ್ದಾರೆ, ಎಂದರು.

<><><>

ಕೇಂದ್ರದ, ಪಿಂಚಣಿ ಮತ್ತು ಪಿಂಚಣಿದಾರರ ಅಭ್ಯುದಯ ಇಲಾಖೆ, ನಾಲ್ಕನೇ ಆವೃತ್ತಿಯ, ಡಿಜಿಟಲ್ ಜೀವಿತ ಪ್ರಮಾಣಪತ್ರ ಸಲ್ಲಿಕೆ ಅಭಿಯಾನದಡಿ, **1** ಕೋಟಿ **54** ಲಕ್ಷ ಪ್ರಮಾಣ ಪತ್ರಗಳನ್ನು ಅಂಗೀಕರಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ **1** ಗಂಟೆ **10** ನಿಮಿಷಕ್ಕೆ.